2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 133/2018

| | | |
|---|---|---|
| ಸಾಕ್ಷಿದಾರರ ಹೆಸರು | - ರಘು | ಪಿಡಬ್ಲೂ -05 |
| ತಂದೆಯ ಹೆಸರು | - ಮಂಜಯ್ಯ | ಸಿಡಬ್ಲೂ -09 |
| ವಯಸ್ಸು | - 40 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಸಿದ್ದರಹಳ್ಳಿ, ಹಾಸನ | |

ದಿನಾಂಕಃ 26.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಮೃತ ಹೇಮಲತ ನನ್ನ ತಂಗಿ. ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ತಂಗಿಯ ಗಂಡ. ಚಾಸಾ.2 ನನ್ನ ತಮ್ಮ. ಚಾಸಾ.5 ನನ್ನ ಚಿಕ್ಕಮ್ಮ. ಚಾಸಾ.6 ನನ್ನ ದೊಡ್ಡಮ್ಮ. ಚಾಸಾ.7 ನನ್ನ ತಂಗಿ. ಚಾಸಾ.8 ನನ್ನ ಸಂಬಂಧಿ.

2. ಚಾಸಾ.5 ಬೈರಮ್ಮಳಿಗೆ ಒಟ್ಟು ಮೂವರು ಮಕ್ಕಳು. ಮೃಳ ಹೇಮಲತ ಹಾಗೂ ಆರೋಪಿ ಪರಸ್ಪರ ಪ್ರೀತಿಸಿ ಮೂಡಿಗೆರೆ ಯಲ್ಲಿ ನಡೆದ ಮದುವೆ ಸಮಾರಂಭದಲ್ಲಿ ಮದುವೆ ಆಗಿದ್ದರು. ಹೇಮಲತ ಮರಣಹೊಂದುವ 9 ವರ್ಷಗಳ ಹಿಂದೆ ಮದುವೆಯಾಗಿತ್ತು. ಅವರಿಗೆ ಇಬ್ಬರು ಗಂಡು ಮಕ್ಕಳು ಜನಿಸಿದ್ದಾರೆ. ಆರೋಪಿಯು ಕೆರೆಮಕ್ಕಿ ಗ್ರಾಮದ ನಿವಾಸಿ.

3. ಮದುವೆಯ ನಂತರ ಹೇಮಲತ ಆರೋಪಿಯೊಂದಿಗೆ ಕೆರೆಮಕ್ಕಿಯಲ್ಲಿ ಸ್ವಂತ ಮನೆಯಲ್ಲಿ ವಾಸವಿದ್ದರು. ಮನೆಯಲ್ಲಿ ಆರೋಪಿಯ ತಾಯಿ ಮತ್ತು ಸಂಸಾರದೊಂದಿಗೆ ವಾಸವಿದ್ದರು.

4. ಯಾವಾಗಲೂ ಆರೋಪಿ ಹಾಗೂ ಮೃತಳ ಮಧ್ಯೆ ಜಗಳ ನಡೆಯುತ್ತಿತ್ತು. ಆರೋಪಿ ಕುಡಿದು ಬಂದು ಮೃತಳಿಗೆ ಹಲ್ಲೆ ನಡೆಸುತ್ತಿದ್ದ. ಈ ವಿಚಾರವನ್ನು ಮೃತಳು ತವರು ಮನೆಗೆ ಬಂದಾಗ ನಮಗೆ ತಿಳಿಸುತ್ತಿದ್ದಳು. ಆರೋಪಿ ಹಲ್ಲೆ ನಡೆಸಿದಾಗಲೆಲ್ಲ ಮೃತಳು ತವರು ಮನೆಗೆ ಮಕ್ಕಳೊಂದಿಗೆ ಬಂದು 5-6 ತಿಂಗಳು ಇರುತ್ತಿದ್ದಳು. ಆರೋಪಿ ಬಂದು ಮೃತಳನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ಹೇಳಿ ಕರೆದುಕೊಂಡು ಹೋಗಿದ್ದ.

5. ಮೃತಳ ಮರಣಹೊಂದುವ ಸುಮಾರು 15 ದಿನಗಳ ಹಿಂದೆ ಆರೋಪಿ ಅವಳನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ಹೇಳಿ ಕರೆದುಕೊಂಡು ಹೋಗಿದ್ದನು.

6. ಕಳೆದ ಆರು ವರ್ಷಗಳ ಹಿಂದೆ ಒಂದು ಆರೋಪಿ ಮೃತಳಿಗೆ ಅಂಬಲಿಯಲ್ಲಿ ವಿಷ ಹಾಕಿ ಕುಡಿಸಿದ್ದನು. ಊರಿನ ಜನ ಮೃತಳನ್ನು ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದರು. ಆಗ ನನ್ನ ತಮ್ಮ ಆಸ್ಪತ್ರೆಗೆ ಹೋಗಿ ಮೃತಳನ್ನು ನೋಡಿ ನಮಗೆ ಕರೆ ಮಾಡಿದ. ನಾನು ಮರುದಿನ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಗೆ ಬೇಟಿ ನೀಡಿ ಹೇಮಲತಳನ್ನು ಬೇಟಿ ಮಾಡಿದೆ. ಹೇಮಲತಳು ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಯ ಐಸಿಯು ನಲ್ಲಿ

ದಾಖಲಾಗಿದ್ದಳು. ಮೂರು ದಿನಗಳ ನಂತರ ಚಿಕ್ಕಮಗಳೂರು ಸರ್ಕಾರಿ ಆಸ್ಪತ್ರೆಯ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ಮೃತಳನ್ನು ಹಾಸನದ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದರು.

7. ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಮೃತಳು ಒಂದು ವಾರಗಳ ಕಾಲ ಚಿಕಿತ್ಸೆ ಪಡೆದಳು. ಹಾಸನ ಸರ್ಕಾರಿ ಆಸ್ಪತ್ರೆಯವರು ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಮಂಗಳ ಆಸ್ಪತ್ರೆಗೆ ಕಳುಹಿಸಿದರು. ಅಲ್ಲಿ ಮೃತಳು ಸುಮಾರು 15-20 ದಿನ ಚಿಕಿತ್ಸೆ ಪಡೆದಳು. ನಂತರ ಚಿಕಿತ್ಸೆ ಫಲಕಾರಿಯಾಗದೇ ಹೇಮಲತ ಮಂಗಳ ಆಸ್ಪತ್ರೆಯಲ್ಲಿ ಮರಣಹೊಂದಿದಳು. ಮೃತಳ ಶವವನ್ನು ಮುಂದಿನ ಕ್ರಮಕ್ಕಾಗಿ ಹಾಸನದ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದರು. ನಾವು ಸಂಬಂಧಿಕರು ಹಾಸನದ ಸರ್ಕಾರಿ ಆಸ್ಪತ್ರೆಗೆ ಬೇಟಿ ನೀಡಿದ್ದೆವು.

8. ಮೃತಳ ಮಂಗಳ ಆಸ್ಪತ್ರೆಯಲ್ಲಿದಾಗ ನಾನು ಮಾತನಾಡಿಸಿದ್ದೇನೆ. ಆ ಸಮಯದಲ್ಲಿ ಅವಳು ಆರೋಪಿಯು ಅಂಬಲಿಯಲ್ಲಿ ವಿಷ ಹಾಕಿ ಕುಡಿಸಿದ್ದಾನೆ ಎಂದು ನನಗೆ ತಿಳಿಸಿದಳು. ಮಲ್ಲಂದೂರು ಪೋಲೀಸರು ಹಾಸನದ ಸರ್ಕಾರಿ ಆಸ್ಪತ್ರೆಗೆ ಬಂದು ವಿಚಾರಣೆ ನಡೆಸಿದರು. ನಾನು ಮೃತಳ ಸಾವಿನ ಬಗ್ಗೆ ಮಲ್ಲಂದೂರು ಪೋಲೀಸರಿಗೆ ದಿಃ 04.06.2018 ರಂದು ಹೇಳಿಕೆ ನೀಡಿದ್ದೇನೆ.

9. ನಂತರ ಚಿಕ್ಕಮಗಳೂರು ಗ್ರಾಮಾಂತರ ಪೋಲೀಸರು ದಿಃ 06.06.2018 ರಂದು ವಿಚಾರಣೆಗೆ ಕರೆದಿದ್ದರು. ಮೃತಳ ಸಾವಿನ ಬಗ್ಗೆ ವಿಚಾರಿಸಿ ನನ್ನ ಹೇಳಿಕೆ ಪಡೆದಿದ್ದಾರೆ.

<u>ಪಾಟೀ ಸವಾಲುಃ ಶ್ರೀ ಜೆ.ಕೆ.ಎಸ್., ವಕೀಲರಿಂದ ಆರೋಪಿ ಪರವಾಗಿ</u>

10. ಚಾಸಾ.7 ಗೊತ್ತು. ಚಾಸಾ.7 ಹಾಗೂ ಮೃತ ಹೇಮಲತ ಒಂದೇ ತಾಯಿಯ ಮಕ್ಕಳು. ಚಾಸಾ.5 ಅವರ ತಾಯಿ. ನನ್ನ ತಂದೆಗೆ ಇಬ್ಬರು ಹೆಂಡತಿಯರು. ನಾನು ಮೊದಲ ಹೆಂಡತಿಯಿಂದ ಜನಿಸಿದ ಮಗ. ನನ್ನ ತಾಯಿ ಮರಣ ಹೊಂದಿದ್ದಾರೆ. ನಾವು ನಮ್ಮ ತಂದೆಯ ಆಸ್ತಿಯಲ್ಲಿ ಭಾಗಾಂಶ ಪಡೆದಿಲ್ಲ. ನನ್ನ ತಂದೆಗೆ ಒಟ್ಟು ಮೂರು ಎಕರೆ ಜಮೀನು ಇದೆ. ಮೃತಳದು ಲವ್ ಕಂ ಅರೇಂಜ್ ಮ್ಯಾರೇಜ್ ಆಗಿತ್ತು.

11. ಹೇಮಲತ ಮದುವೆಯ ನಂತರ ಆರೋಪಿಯೊಂದಿಗೆ ಚೆನ್ನಾಗಿಯೇ ಸಂಸಾರ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಎಂದೂ ಆರೋಪಿಯ ಮನೆಗೆ ಬೇಟಿ ನೀಡಿರಲಿಲ್ಲ. ಆರೋಪಿ ಹಾಗೂ ಮೃತಳ ಮದುವೆಗೆ ನಮ್ಮ ಒಪ್ಪಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಹೇಮಲತ ಆರೋಪಿಯನ್ನು ಮದುವೆ ಯಾದ ಕಾರಣಕ್ಕೆ ನನಗೆ ಅಸಮಾಧಾನ ಇದೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ನನ್ನ ಹಾಗೂ ಆರೋಪಿಯ ಸಂಬಂಧ ಚೆನ್ನಾಗಿಲ್ಲ ಎಂದರೆ ಸರಿಯಲ್ಲ. ನಮ್ಮ ಹಾಗೂ ನನ್ನ ತಂದೆಯ ಎರಡನೇ ಹೆಂಡತಿ ಮಕ್ಕಳ ಮದ್ಯೆಸಂಬಂಧ ಚೆನ್ನಾಗಿಲ್ಲ ಎಂದರೆ ಸರಿಯಲ್ಲ.

12. ಆರೋಪಿ ಹಾಗೂ ಮೃತನ ಸಂಸಾರಿಕ ಜೀವನ ರಾಜಿ ಪಂಚಾಯತಿ ಆದ ಬಗ್ಗೆ ದಾಖಲೆಗಳು ಲಭ್ಯವಿಲ್ಲ. ಹೇಮಲತ ಜೀವಂತ ಇದ್ದಾಗ ಎಂದೂ ಸಂತ್ವಾನ ಕೇಂದ್ರಕ್ಕೆ ಅರ್ಜಿ ಸಲ್ಲಿಸಿಲ್ಲ.

ಈ ಪ್ರಕರಣ ದಾಖಲಾಗುವ ಮೊದಲು ಎಂದೂ ಹೇಮಲತ ಪೋಲೀಸರಲ್ಲಿ ಆರೋಪಿ ವಿರುದ್ಧ ದೂರು ಸಲ್ಲಿಸಿಲ್ಲ. ಕೌಟುಂಬಿಕ ನ್ಯಾಯಾಲಯದಲ್ಲಿ ಹೇಮಲತ ಜೀವಂತ ಇದ್ದಾಗ ಯಾವುದೇ ಪ್ರಕರಣ ದಾಖಲಾಗಿಲ್ಲ.

13. ಚಾಸಾ.7 ಗಂಡನನ್ನು ಬಿಟ್ಟು ತವರು ಮನೆಯಲ್ಲಿ ಇದ್ದಾಳೆ ಎಂದರೆ ಸರಿಯಲ್ಲ. ಈಗ ಚಾಸಾ.7 ರವರ ಗಂಡ ಮರಣ ಹೊಂದಿದ ನಂತರ ಅವಳು ತವರು ಮನೆಯಲ್ಲಿದ್ದಾಳೆ. ಗಂಡ ಇದ್ದಾಗಲೂ ಕೂಡ ಚಾಸಾ.7 ತವರು ಮನೆಯಲ್ಲಿ ಇದ್ದಳು ಎಂದರೆ ಸರಿಯಲ್ಲ. ಚಾಸಾ.7 ಹಾಗೂ ಅವಳ ಗಂಡ ಮೊದಲು ಸಿದ್ದರಹಳ್ಳಿಯಲ್ಲಿ ವಾಸವಿದ್ದರು.

14. ಮೃತಳು ಎಂದೂ ಸಂಸಾರಿಕ ಜಗಳದ ಬಗ್ಗೆ ನನ್ನೊಂದಿಗೆ ಮಾತನಾಡಿಲ್ಲ ಎಂದರೆ ಸರಿಯಲ್ಲ. ಮೃತಳು ಆರು ತಿಂಗಳ ಕಾಲ ತವರು ಮನೆಯಲ್ಲೇ ಇದ್ದಳು ಎಂದು ಸುಳ್ಳು ಸಾಕ್ಷಿ ಹೇಳುತ್ತಿದೇನೆ ಎಂದರೆ ಸರಿಯಲ್ಲ. ಮರಣಹೊಂದುವ ಹದಿನೈದು ದಿನಗಳ ಮೊದಲು ಹೇಮಲತ ಗಂಡನ ಮನೆಗೆ ಹೋಗುವಾಗ ಯಾವುದೇ ಬರವಣಿಗೆ ಆಗಿರಲಿಲ್ಲ. ಹಾಗೆ ಅವಳು ಗಂಡನ ಮನೆಗೆ ಹೋದ ದಿನಾಂಕ ನೆನಪಿಲ್ಲ.

15. ನಾನು ಬೇಟಿಯಾಗುವ ಮೊದಲೇ ಹೇಮಲತ ಮರಣ ಹೊಂದಿದ್ದಾಳೆ ಎಂದರೆ ಸರಿಯಲ್ಲ. ಐದಾರು ವರ್ಷಗಳ ಮೊದಲು ಆರೋಪಿ ಮೃತಳಿಗೆ ಅಂಬಲಿಯಲ್ಲಿ ವಿಷ ಹಾಕಿ

ಕುಡಿಸಿದ್ದಾನೆ ಎಂದು ಮೃತಳು ನನ್ನ ಬಳಿ ಹೇಳಿದ್ದಾಳೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ಮೃತಳು ಅಂಬಲಿಯಲ್ಲಿ ವಿಷ ಹಾಕಿದ ವಿಚಾರ ತಿಳಿಸಿದಾಗ ನಮ್ಮ ಕುಟುಂಬದ ಎಲ್ಲಾ ಸದಸ್ಯರು ಹಾಜರಿದ್ದೆವು. ಮೃತಳು ಮೇಲೆ ಹೇಳಿದಂತೆ ಹೇಳಿಕೆ ನೀಡಿದಾಗ ಮಧ್ಯಾಹ್ನ 2.00 ಗಂಟೆ ಸಮಯವಾಗಿದ್ದು ವೈದ್ಯರು ಇರಲಿಲ್ಲ. ನಮ್ಮ ಬಳಿ ಮೃತಳು ಅಂಬಲಿಯಲ್ಲಿ ವಿಷ ಹಾಕಿದ ವಿಚಾರ ತಿಳಿಸಿದ 5-6 ದಿನಗಳ ನಂತರ ಮರಣಹೊಂದಿದಳು. ಹಾಸನ ಆಸ್ಪತ್ರೆಯಲ್ಲಿ ಮೃತಳನ್ನು ಐಸಿಯುನಲ್ಲಿ ಇಡಲಾಗಿತ್ತು ಎಂದರೆ ಸರಿಯಲ್ಲ.

17. ಐಸಿಯು ಒಳಗೆ ಯಾರನ್ನು ಬಿಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಮಂಗಳ ಆಸ್ಪತ್ರೆಯಲ್ಲಿ ಯಾವ ವಾರ್ಡಿನಲ್ಲಿ ಮೃತಳನ್ನು ದಾಖಲಿಸಿದ್ದೆವು ಎಂದು ಹೇಳಲಾಗುವುದಿಲ್ಲ. ಅದೊಂದು ಸಾಮಾನ್ಯ ವಾರ್ಡ ಆಗಿದ್ದು ಎಷ್ಟು ಬೆಡ್ಡಿನ ವ್ಯವಸ್ಥೆ ಇತ್ತು ಎಂದು ಹೇಳಲಾಗುವುದಿಲ್ಲ. ಬೆಡ್ ನಂಬರು ಮತ್ತು ರೂಮು ನಂಬರು ಹೇಳಲಾಗುವುದಿಲ್ಲ. ಯಾವ ವೈದ್ಯರು ಚಿಕಿತ್ಸೆ ನೀಡುತ್ತಿದ್ದರು ಎಂದು ಹೇಳಲಾಗುವುದಿಲ್ಲ. ಮಂಗಳ ಆಸ್ಪತ್ರೆಯಲ್ಲಿ ನಾನು ಪೋಲೀಸರಲ್ಲಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

18. ದಿಃ 04.06.2018 ರಂದು ನನ್ನನ್ನು ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿ ಪೋಲೀಸರು ವಿಚಾರಿಸಿದ್ದಾರೆ. ಆ ಸಮಯದಲ್ಲಿ ನಾನು, ಗಣೇಶ, ಮೋಹನರಾಜು ಹಾಗೂ ನಮ್ಮ ಕುಟುಂಬದ

ಇತರ ಸದಸ್ಯರು ಇದ್ದೆವು. ಹೇಮಲತ ಚಾಸಾ.6 ರವರ ಬಳಿ ಆಸ್ತಿಯಲ್ಲಿ ಭಾಗಾಂಶ ನೀಡುವಂತೆ ಕೇಳುತ್ತಿದ್ದಳು ಎಂದರೆ ಸರಿಯಲ್ಲ. ಆಸ್ತಿ ಭಾಗಾಂಶ ವಿಚಾರದಲ್ಲಿ ಕೋಪ ಮಾಡಿ ಕೊಂಡು ಮೃತಳು ತವರು ಮನೆಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ.7 ರವರನ್ನು ಮನೆಯಲ್ಲಿಟ್ಟುಕೊಂಡು ಮೃತಳಿಗೆ ಆಸ್ತಿ ನೀಡಲಾಗುವುದಿಲ್ಲ ಎಂದು ಹೇಳಲಾಗಿತ್ತು ಎಂದರೆ ಸರಿಯಲ್ಲ. ಈ ವಿಚಾರದಲ್ಲಿ ಆರೋಪಿ ಹಾಗೂ ಚಾಸಾ.6 ರವರ ಕುಟುಂಬದ ಮಧ್ಯೆ ಸಂಬಂಧ ಸರಿಯಾಗಿರಲಿಲ್ಲ ಎಂದರೆ ಸರಿಯಲ್ಲ.

19. ಮೃತಳು ಆಗಾಗ ಹೊಟ್ಟೆನೋವಿನಿಂದ ನರಳುತ್ತಿದ್ದಳು ಎಂದರೆ ಸರಿಯಲ್ಲ. ಆ ಕಾರಣಕ್ಕೆ ಅವಳು ಮಾನಸಿಕ ಖಿನ್ನತೆಗೆ ಒಳಗಾಗಿದ್ದಳು ಎಂದರೆ ಸರಿಯಲ್ಲ. ಮೃತಳು ಮೊದಲು 2-3 ಬಾರಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದಾಳೆ ಎಂದರೆ ಸರಿಯಲ್ಲ. ಮಾನಸಿಕ ಖಿನ್ನತೆಯಿಂದ ಮೃತಳು ಇಲಿ ಪಾಷಾಣ ತಿಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರೆ ಸರಿಯಲ್ಲ. ಚಾಸಾ.6 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿಯನ್ನು ಉಳಿಸಿಕೊಳ್ಳುವ ದುರುದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತಳು ನನ್ನ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ